# ಜೈನ್ ವಿಶ್ವವಿದ್ಯಾಲಯ ಉಪನ್ಯಾಸಕರಿಗೆ ಕೇಂದ್ರ ಸನ್ಮಾನ!

ಕೇಂದ್ರ ಸರ್ಕಾರವು ಪ್ರತಿವರ್ಷ ರಾಷ್ಟ್ರಪತಿಗಳ ಹೆಸರಿನಲ್ಲಿ ಭಾಷೆಯ ಬೆಳವಣಿಗೆ ಮತ್ತು ಪೋಷಣೆಯ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿರುವ ೬೦ವರ್ಷ ಮೇಲ್ಪಟ್ಟ ಹಿರಿಯ ವಿದ್ವಾಂಸರಿಗೆ "ಸರ್ಟಿಫಿಕೇಟ್ ಆಫ್ ಹಾನರ್" ಎಂಬ ಪ್ರಶಸ್ತಿಪತ್ರ ಮತ್ತು ೫ಲಕ್ಷ ರೂಪಾಯಿಗಳನ್ನು ನೀಡುತ್ತಿದೆ. ಅದೇ ರೀತಿ ೪೫ವರ್ಷದೊಳಗಿನ ವಿದ್ವಾಂಸರಿಗೆ 'ಮಹರ್ಷಿ ಬಾದರಾಯಣ ವ್ಯಾಸ ಸಮ್ಮಾನ್' ಪ್ರಶಸ್ತಿಪತ್ರ ಮತ್ತು ೧ಲಕ್ಷ ರೂಪಾಯಿಗಳನ್ನು ಸಂಸ್ಕೃತ, ಪಾಲಿ, ಪಾಕೃತ, ಅರೆಬಿಕ್, ಪರ್ಷಿಯನ್ ಭಾಷೆಗಳಿಗೆ ನೀಡುತ್ತಿತ್ತು. ೨೦೧೬ನೇ ಸಾಲಿನಿಂದ ಕನ್ನಡ, ತೆಲಗು, ಮಲೆಯಾಳ ಭಾಷೆಗಳಿಗೂ ಈ ಪ್ರಶಸ್ತಿಗಳನ್ನು ವಿಸ್ತರಿಸಲಾಗಿದೆ.

೨೦೧೬ನೇ ಸಾಲಿನಲ್ಲಿ ಹಿರಿಯ ವಿದ್ವಾಂಸರಾದ ಷ. ಷಟ್ಟರ್ ರವರಿಗೆ "ಸರ್ಟಿಫಿಕೇಟ್ ಆಫ್ ಹಾನರ್" ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

೨೦೧೬ನೇ ಸಾಲಿನಲ್ಲಿ ಯುವ ಪ್ರತಿಭೆಯ ಪ್ರೋತ್ಸಾಹಕ್ಕೆ ನೀಡುವ 'ಮಹರ್ಷಿ ಬಾದರಾಯಣ ವ್ಯಾಸ ಸಮ್ಮಾನ್' ಪ್ರಶಸ್ತಿಯು ಡಾ. ಮಂಜುನಾಥ ರವರಿಗೆ ಲಭಿಸಿದೆ.

೨೦೧೭ನೇ ಸಾಲಿನಲ್ಲಿ ಹಿರಿಯ ವಿದ್ವಾಂಸರಾದ ಟಿ.ವಿ. ವೆಂಕಟಾಚಲಶಾಸ್ತ್ರಿ ಯವರಿಗೆ "ಸರ್ಟಿಫಿಕೇಟ್ ಆಫ್ ಹಾನರ್" ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

೨೦೧೮ನೇ ಸಾಲಿನಲ್ಲಿ ಹಿರಿಯ ವಿದ್ವಾಂಸರಾದ ಎಂ. ಚಿದಾನಂದಮೂರ್ತಿಯವರಿಗೆ "ಸರ್ಟಿಫಿಕೇಟ್ ಆಫ್ ಹಾನರ್" ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ದಿನಾಂಕ ೪-೪-೨೦೧೯ ರಂದು ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಮೇಲಿನ ಎಲ್ಲ ವಿದ್ವಾಂಸರಿಗೆ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.